ಆರತಿ ಘಟಿಕಾರ್, ದುಬೈ

*ಸನ್ಮಾರ್ಗದಲ್ಲಿ ನಡೆಯುವವರಿಗೆ ಟ್ರಾಫಿಕ್ ಜಾಮ್ ಇರುವುದಿಲ್ಲವಂತೆ. ಹೌದೇ?*



ನಿಜ. ಆದರೆ ಕಲ್ಲುಮುಳ್ಳಿನ ಹಾದಿಯಾದ್ದರಿಂದ ಇಡೀ ಪಾದ ಬ್ಯಾಂಡೇಜ್‌ಗಳಿಂದ ಹೌಸ್‌ಫುಲ್!

ನೇ.ಗೋ.ಭ., ಕುಕ್ಕೆ ಸುಬ್ರಹ್ಮಣ್ಯ

*ಹೋದಲ್ಲಿ ರಂಗ, ಮನೆಯಲ್ಲಿ ಮಂಗ ಅಂದರೇನು ರಾಮ್‌ಜೀ?*

ನಮ್ಮ ಪ್ರಧಾನಿಗಳನ್ನು ಕೇಳಬೇಕು; ವಿದೇಶದಲ್ಲಿ ಜೈ, ನಮ್ಮ ದೇಶದಲ್ಲಿ why?

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ

*ಸಿಬಿಐ ಅಂದರೆ ಏನು ಗುರು?*

ಸಿಕ್ಕವರನ್ನೂ ಬಿಟ್ಟುಬಿಡಬೇಕಾದಂತಹ ಐಬಿಗೆ ತುತ್ತಾಗುವ ಸಂಸ್ಥೆ.

ಅಮರಯ್ಯಾ ಪತ್ರಿಮಠ, ಸುರಪೂರ

*ಕಟ್ಟಿಟ್ಟ ಬುತ್ತಿ, ಹೇಳಿಕೊಟ್ಟ ಮಾತು ಬಹುದಿನ ಬಾರದಂತೆ?*



ಅದು ಅಂದಿನ ಮಾತು. ಈಗ ಕಟ್ಟಿಟ್ಟ ಬುತ್ತಿ ಫ್ರಿಡ್ಜಲ್ಲಿ, ಹೇಳಿಕೊಟ್ಟ ಮಾತು ಸೀರಿಯಲ್ಲಲ್ಲಿ ಬಹುಕಾಲ ಬರುತ್ತವೆ.

ಬಿ.ಎಸ್. ನಾರಾಯಣಸ್ವಾಮಿ, ಹೊಸಕೋಟೆ

*ನಾನು ಸತಿಯೊಡನೆ ಅತ್ತೆಯ ಮನೆಯಲ್ಲೇ ಬಿಡಾರ ಹೂಡಬಯಸಿದರೆ ಹೆಂಡತಿಯೇ ನನ್ನನ್ನು ಹೊರಗಟ್ಟದಳಲ್ಲಾ...?*

ಅತ್ತೆಮನೆಯಲ್ಲೇ ಕಾಲೊತ್ತಿಸ್ಕೊಂಡು ಮಲಗಿರಕ್ಕೆ ನೀವೇನು ಶ್ರೀಮನ್ನಾರಾಯಣ ಅಲ್ಲವಲ್ಲ.

ಆರ್. ಮಧುಸೂದನ್, ಹಾಸನ

*ಎಡಭಾಗದಲ್ಲಿ ಆಸ್ಪತ್ರೆ, ಬಲಭಾಗದಲ್ಲಿ ಸ್ಮಶಾನ ಇದೆ. ಸೈಟ್ ಖರೀದಿಸಲೋ, ಬೇಡವೋ?*

ಖರೀದಿಸಿ. ಬಿಲ್ಡಿಂಗ್ ಕಟ್ಟಿ ಕೆಳಗೆ ಸ್ಕ್ಯಾನಿಂಗ್ ಸೆಂಟರ್‌ಗೂ ಮೇಲೆ ತಿಥಿ ಮಾಡ್ಲೋವ್ರಿಗೂ ಕೊಟ್ಟರೆ ಭರ್ಜರಿ ಬಾಡಿಗೆ.

ಪಿ.ಜೆ. ರಾಘವೇಂದ್ರ, ಮೈಸೂರು

*ವಿಗ್ಗು, ಹಲ್ಸೆಟ್ಟು, ಡ್ಯೂಪು ಮತ್ತು ಕಂಠದಾನ ಕಲಾವಿದರ ಸಹಾಯ ಪಡೆಯುವ ನಟ/ನಟಿಯರನ್ನು ಸ್ಟಾರ್ ಎನ್ನುವುದೇಕೆ?*

ಜಗನಿಯಮ. ಕಾರ್ ಆಗಲಿ, ಸ್ಟಾರ್ ಆಗಲಿ, ಬಿಡಿಭಾಗದಲ್ಲಿ ಇಲ್ದೇಯಿರೋ ಅಟ್ರಾಕ್ಷನ್ನು ಫಿನಿಷ್ಡ್ ಪ್ರಾಡಕ್ಟಲ್ಲಿ ಇರತ್ತೆ.

ಪೇಂಟರ್ ಪಾಪು, ಸಂತೇಮರಹಳ್ಳಿ

*ನೆನಪನ್ನು ಎಂತಹ ಗುಂಡಿಯಲ್ಲಿ ಹಾಕಿ ಹೂತರೂ ಮತ್ತೆ ಎದ್ದುಬಂದು ನಮ್ಮನ್ನು ಕಾಡುವುದೇಕೆ?*

ಅದರದು ಹೆಚ್ಚು ಅದುಮಿದಷ್ಟೂ ಹೆಚ್ಚು ಚಿಮ್ಮುವ ಸ್ಪ್ರಿಂಗಿನ ಗುಣ!

ಕುಬೇರಪ್ಪ ವಿಭೂತಿ, ಹರಿಹರ

*ವಿಷಕನ್ಯೆ ಹಾಗೂ ವಿಶ್ವಸುಂದರಿಯರಲ್ಲಿ ವ್ಯತ್ಯಾಸವೇನು?*

ವಿಷಕನ್ಯೆ ಮರ್ಡರ್ ವೆಪನ್; ವಿಶ್ವಸುಂದರಿ ಮಾರ್ಕೆಟ್ ವೆಪನ್.

ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ

*ಶ್ರೀಕೃಷ್ಣ ಸಾರಥ್ಯದ ಪಾಂಡವರು ದುರ್ಯೋಧನನ 11 ಅಕ್ಷೋಹಿಣಿ ಸೈನ್ಯವನ್ನು ಗೆದ್ದದ್ದು ಹೇಗೆ?*

ರೊಚ್ಚಿನಿಂದ. ರೊಚ್ಚಿಗಿರುವ ಕಟುಕತೆ ಮಚ್ಚಿಗಿರುವುದಿಲ್ಲ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

*ಆಸ್ಪತ್ರೆಯ ಮೇಲೆ + ಚಿಹ್ನೆ ಇರುತ್ತದಲ್ಲ, ಅದರ ಅರ್ಥವೇನು?*

ಮೇಲೆ ಇರುವುದಲ್ಲವೇ! ಮೇಲಕ್ಕೆ ಹೋಗುವವರ ಸಂಖ್ಯೆ ಪ್ಲಸ್ ಆಗುವುದು ಎಂಬ ಸೂಚನೆ!

ಅನಂತಪದ್ಮನಾಭ ಹೆಚ್.ಎಂ., ಮೈಸೂರು

*ಹೊಸ ಕಾರಿಗೂ, ಹೊಸ ಹೆಂಡತಿಗೂ ಇರುವ ವ್ಯತ್ಯಾಸವೇನು?*

ಹೊಂದಿದವರ ಆಶಯದಲ್ಲೇ ವ್ಯತ್ಯಾಸ – ಕಾರು ನಿಂತುಹೋಗಬಾರದು, ಹೆಂಡತಿ ಓಡಿಹೋಗಬಾರದು!

## ಬಹುಮಾನಿತ ಪ್ರಶ್ನೆ

ಪಿ. ಚಿದಾನಂದ, ಚಿತ್ರದುರ್ಗ

*ಪ್ರೇಯಸಿಯನ್ನು ಹುಣ್ಣಿಮೆ ಚಂದ್ರನಿಗೆ ಹೋಲಿಸುತ್ತಾರಲ್ಲಾ...?*

ಸಿಗೋದೇ ತಿಂಗಳಿಗೆ ಒಂದೋ ಎರಡೋ ದಿನ; ಆಗಲೂ ಅವಿತು ಕಾಣಿಸಿ, ಅವಿತು ಕಾಣಿಸಿ ಸತಾಯ್ಸೋದ್ರಿಂದ.

ಪ್ರಕಾಶ ಮೂಲ್ಕಿ, ಕುಳಾಯಿ

*ಅದೃಷ್ಟವನ್ನೇ ನಂಬೋಣವೆಂದರೆ ಅದಕ್ಕೆ ಬರ; ಕಷ್ಟಪಟ್ಟರೂ ಯಶಸ್ಸು ಸಿಗಲೊಲ್ಲದು. ಏನು ಮಾಡಲಿ?*

ಪಾಪ! ನಿಮ್ಮದೂ ರಾಹುಲರ ಸ್ಥಿತಿಯೇ ಎಂದಾಯಿತು.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಚಮಚ ಪದಕ್ಕೆ ಅರ್ಥಪೂರ್ಣ ವ್ಯಾಖ್ಯಾನವೇನು?*

ಕೈಯಿಂದ ಮುಟ್ಟಲೂ ಹೇಸುವುದನ್ನು ನೇರವಾಗಿ ಬಾಯಿಗೆ ಹಾಕಿಕೊಳ್ಳಲು ಬಳಸುವ ಸಾಧನ ಎಂದರು ನಾ.ಕಸ್ತೂರಿ.

ರತ್ನಜ, ಮೈಸೂರು

*ಗುಟುಕು ಹಾಲಿಗೂ ಪಾವಿರಾರು ಮಕ್ಕಳು ಪರದಾಡುವಾಗ ದೇವಸ್ಥಾನಗಳಲ್ಲಿ ಕೊಡಗಟ್ಟಲೆ ಕ್ಷೀರಾಭಿಷೇಕದ ಅರ್ಥವೇನು?*

ಮನುಷ್ಯನಿಗೆ ಪ್ರಕೃತಿಯೇ ಗುರು – ಉತ್ತರಕರ್ನಾಟಕದಲ್ಲಿ ಬರ, ತಮಿಳುನಾಡಿನಲ್ಲಿ ನೆರೆಯೇ ಇವನಿಗೆ ದಾರಿದೀಪ!

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ಸತ್ಯಕ್ಕೆ ಜಯ ಆಮೆವೇಗದಲ್ಲಿ ಸಿಗಲು ಕಾರಣವೇನು?*




ವರ್ತಕರು ತೋಡಿದ ಹಳ್ಳ, ಸಾಕ್ಷಿಗಳು ನಿರ್ಮಿಸಿದ ಹಂಪು, ವಾದಿಗಳು ಕಟ್ಟಿದ ಗೋಡೆಗಳನ್ನು ದಾಟಿ ಬರಬೇಕಲ್ಲ!

ಓಂ ಚನ್ನೇಶ್, ಭದ್ರಾವತಿ

*ಕೈಬರಹಕ್ಕೂ, ಹಣೆಬರಹಕ್ಕೂ ವ್ಯತ್ಯಾಸವೇನು?*

ಕೈಬರಹ ಚೆನ್ನಾಗಿದ್ದರೆ ಪಾಸ್; ಹಣೆ ಬರಹ ಚೆನ್ನಾಗಿದ್ದರೆ ಬಾಸ್!

■ ರಾಮ್